ಈ) ಈ ದೇವಾಲಯಗಳಿಗೆ ಪ್ರವಾಸಿಗರನ್ನು ಆಕರ್ಷಿಸಲು ಸರ್ಕಾರ ಮೂಲಭೂತ ಸೌಲಭ್ಯಗಳನ್ನು ಕಲ್ಪಸುವುದೇ;

ಈ ದೇವಾಲಯಗಳ ಬಗ್ಗೆ ಮಾಹಿತಿಯನ್ನು ಪ್ರವಾಸಿ ಪ್ರಚಾರ ಸಾಮಾಗ್ರಿಗಳಲ್ಲಿ ಸೇರಿಸಿಕೊಳ್ಳಲಾಗಿದ್ದು, ಪ್ರವಾಸಿಗರಿಗೆ ಮಾಹಿತಿ ನೀಡಲಾಗುತ್ತಿದೆ. ಹೊಸಬೂದನೂರು ಗ್ರಾಮವು ಮಂಡ್ಯ ಜಿಲ್ಲಾ ಕೇಂದ್ರದಿಂದ ನಾಲ್ಕು ಕಿ.ಮೀ ದೂರದಲ್ಲಿದ್ದು ಇಲ್ಲಿ ಯಾವುದೇ ಸೌಲಭ್ಯಗಳ ನಿರ್ಮಾಣ ಅಗತ್ಯ ಕಂಡು ಬರುವುದಿಲ್ಲ ಹಾಗೂ ಸೂಕ್ತ ನಿವೇಶನವಿರುವುದಿಲ್ಲ.

ಆದರೆ, ಬಸರಾಳು ಗ್ರಾಮವು ಮಂಡ್ಯದಿಂದ 24 ಕಿ.ಮೀ ದೂರದಲ್ಲಿದ್ದು, ಇಲ್ಲಿ ಸೂಕ್ತವಾದ ನಿವೇಶನ ದೊರೆತಲ್ಲಿ ಶೌಚಾಲಯ ಹಾಗೂ ಕುಡಿಯುವ ನೀರನ ಸೌಲಭ್ಯವನ್ನು ನಿರ್ಮಿಸಬಹುದಾಗಿರುತ್ತದೆ. ಈ ಬಗ್ಗೆ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯಿಂದ ವರದಿ ತರಿಸಿಕೊಳ್ಳಲಾಗುವುದು.

ಉ) ಹಾಗಿದ್ದಲ್ಲಿ, ಇದಕ್ಕೆ ಸರ್ಕಾರ ಕೂಡಲೇ ಅನುದಾನವನ್ನು ಬಿಡುಗಡೆ ಮಾಡಲಾಗುವುದೇ;

ಸಮಿತಿಯಿಂದ ನಿವೇಶನದ ಲಭ್ಯತೆಯ ಬಗ್ಗೆ ವರದಿ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಊ) ಎಂದಿನಿಂದ ಅನುದಾನ ಬಿಡುಗಡೆ ಮಾಡಲಾಗುವುದು?

ನಿವೇಶನ ಹಾಗೂ ಪ್ರಸ್ತಾವನೆಗಳನ್ನು ಜಿಲ್ಲಾಧಿಕಾರಿಗಳಿಂದ ಸ್ವೀಕರಿಸಿದ ನಂತರ ಅನುದಾನ ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಕರ್ನಾಟಕ ವಿಧಾನ ಸಭೆ

215 ಶ್ರೀ ಈಶ್ವರ ಭೀಮಣ್ಣ ಖಂಡ್ರೆ(ಭಾಲ್ಕಿ)

ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಅ) ಪ್ರಸಕ್ತ ಸಾಲಿನಲ್ಲಿ ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ವಿಮಾನ ನಿಲ್ದಾಣ ಮತ್ತು ಹೆಲಿಪ್ಯಾಡ್‌ಗಳನ್ನು ನಿರ್ಮಾಣ ಮಾಡಲಾಗುವುದು; ಈ ದಿಸೆಯಲ್ಲಿ ಯಾವ ಯಾವ ಕ್ರಮಗಳನ್ನು ಇಲ್ಲಿಯವರೆವಿಗೆ ಕೈಗೊಳ್ಳಲಾಗಿದೆ.

ಆ) ಇವುಗಳ ನಿರ್ಮಾಣಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು; ಇದಕ್ಕಾಗಿ ಇಲ್ಲಿಯವರೆವಿಗೆ ಬಿಡುಗಡೆಯಾಗಿರುವ ಹಾಗೂ ವೆಚ್ಚವಾಗಿರುವ ಹಣದ ಮೊತ್ತವೆಷ್ಟು (ನಿಲ್ದಾಣವಾರು ವಿವರಗಳನ್ನು ಒದಗಿಸುವುದು);

1. ಗುಲ್ಬರ್ಗ, ಶಿವಮೊಗ್ಗ ಹಾಸನ, ಬಿಜಾಪುರ ಹಾಗೂ ಬಳ್ಳಾರಿಗಳಲ್ಲಿ ರಾಜ್ಯ ಸರ್ಕಾರ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ನೆಲೆಯಲ್ಲಿ (ಪಿಪಿಪಿ ಮೋಡ್) ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿ ಪಡಿಸಲು ಕ್ರಮವಹಿಸುತ್ತಿದೆ.

2. ಉಳಿದಂತೆ ಬೆಳಗಾವಿ, ಹುಬ್ಬಳ್ಳಿ, ಮಂಗಳೂರು ಹಾಗೂ ಮೈಸೂರು ವಿಮಾನ ನಿಲ್ದಾಣಗಳು ಭಾರತ ಸರ್ಕಾರದ ಸ್ವಾಮಿತ್ವದಲ್ಲಿದ್ದು ಇವುಗಳ ಅಭಿವೃದ್ಧಿಯನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಿ (AAI) ಕೈಗೊಳ್ಳುತ್ತಿದೆ. ರಾಜ್ಯ ಸರ್ಕಾರ ಭೂ ಹಾಗೂ ಇತರೆ ಮೂಲಸೌಲಭ್ಯಗಳನ್ನು ಒದಗಿಸುತ್ತಿದೆ. ಪಿಪಿಪಿ ವಿಮಾನ ನಿಲ್ದಾಣಗಳ ಅಭಿವೃದ್ಧಿಯನ್ನು ಆಯ್ಕೆಯಾದ ಭವಿಷ್ಯದ ಖಾಸಗಿ ಪ್ರವರ್ತಕರು (Promoters) ಕೈಗೊಳ್ಳುತ್ತಾರೆ. ಅಭಿವೃದ್ಧಿಗೊಳ್ಳುವ ವಿಮಾನ ನಿಲ್ದಾಣಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

3. ರಾಜ್ಯದಲ್ಲಿ 21 ಕಡೆಗಳಲ್ಲಿ ಹೆಲಿಪ್ಯಾಡ್‌ಗಳನ್ನು ನಿರ್ಮಿಸಲು ಹಾಗೂ ಪ್ರತಿಯೊಂದಕ್ಕೆ ರೂ.10.00 ಲಕ್ಷ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದೆ.

ಇ) ಬೀದರ್‌ನಲ್ಲಿ ವಿಮಾನ ನಿಲ್ದಾಣದ ಕಾರ್ಯ ಯಾವ ಹಂತದಲ್ಲಿದೆ;

ಈ) ಇದಕ್ಕೆ ಭಾರತೀಯ ವಾಯು ಸಂಸ್ಥೆ ಅನುಮತಿ ನೀಡಿದೆಯೇ;

ಭಾರತ ಸರ್ಕಾರದ ನಾಗರೀಕ ವಿಮಾನಯಾನ ಮಂತ್ರಾಲಯವು ದೆಹಲಿಯಲ್ಲಿ 22.12.08ರಂದು ಏರ್ಪಡಿಸಿದ್ದ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರದಂತೆ ಪ್ರಸ್ತುತ ಇರುವ ಆರ್ಥಿಕ ಹಿಂಜರಿತ (Economic Recession) ಹಾಗೂ ವಿರೋದಾಸ್ಪದ ಬೆಳವಣಿಗೆ (Negetive Growth) ಕಾರಣ ಸಧ್ಯದಲ್ಲಿ ಸಣ್ಣ ವಿಮಾನ ನಿಲ್ದಾಣ / ಸಿವಿಲ್ ಎನ್‌ಕ್ಲೇವ್‌ಗಳ ಸ್ಥಾಪನೆ / ಕಾರ್ಯಚರಣೆಯನ್ನು ಸಾಧಿಸಲು ಭಾರತ ಸರ್ಕಾರ ಏರ್ಪಡಿಸಿಕೊಂಡಿರುವ ಒಪ್ಪಂದ ವ್ಯವಸ್ಥೆ (Contractual arrangements)ಗೆ ವಿನಾಯ್ತಿ ನಿಡಲು ತಕ್ಕಸಮಯವಲ್ಲವೆಂದೂ, ಸದರಿ ಪರಿಸ್ಥಿತಿಯನ್ನು ಮುಂದಿನ 6 ತಿಂಗಳ ನಂತರ ಮತ್ತೆ ಪುನಾರಾಮರ್ಶಿಸಿ ತೀರ್ಮಾನಿಸಿ ರಾಜೀವ್‌ಗಾಂಧಿ, ಹೈದರಾಬಾದ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ (RG-HIAL) ಬೀದರ್ ವಿಮಾನ ನಿಲ್ದಾಣ ಕಾರ್ಯಾಚರಣೆ ಸೇವೆ ಕೈಗೊಳ್ಳಲು ಪರಿಶೀಲಿಸುವುದೆಂದು ತೀರ್ಮಾನಿಸಿದೆ, ಈ ಬಗ್ಗೆ ಭಾರತ ಸರ್ಕಾರವನ್ನು ನೆನಪಿಸಿದ್ದು ಅವರ ತೀರ್ಮಾನ ನಿರೀಕ್ಷಿಸಿದೆ.

ಉ) ರಾಜ್ಯದಲ್ಲಿ ಹೊಸ ವಿಮಾನ ನಿಲ್ದಾಣಗಳನ್ನು ಪ್ರಾರಂಭ ಮಾಡುವ ಸಂಬಂಧವಾಗಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದೊಂದಿಗೆ ಎಷ್ಟು ಬಾರಿ ಚರ್ಚಿಸಿದೆ ಹಾಗೂ ಎಷ್ಟು ಪತ್ರಗಳನ್ನು ಕೇಂದ್ರಕ್ಕೆ ಬರೆದಿದೆ;

ಹಲವಾರು ಬಾರಿ ಚರ್ಚಿಸಿದೆ ಹಾಗೂ ಹಲವಾರು ಪತ್ರ ವ್ಯವಹಾರ ಮಾಡಿದೆ.

ಊ) ಈ ಪೈಕಿ ಎಷ್ಟು ವಿಮಾನ ನಿಲ್ದಾಣಗಳಿಗೆ ಕೇಂದ್ರ ಸರ್ಕಾರವು ಅನುಮತಿ ನೀಡಿದೆ (ಪೂರ್ಣವಿವರ ನೀಡುವುದು);

ಗುಲ್ಬರ್ಗಾ ಶಿವಮೊಗ್ಗ, ಬಿಜಾಪುರ, ಹಾಸನ, ಪಿಪಿಪಿ ಆಧಾರಿತ ವಿಮಾನ ನಿಲ್ದಾಣ ಯೋಜನೆಗೆ ತಾತ್ವಿಕ ಅನುಮೋದನೆಯನ್ನು MoCA ಜೂನ್ 08ರಲ್ಲಿ ನೀಡಿರುತ್ತದೆ.

ಋ) ನಿಗದಿತ ಸಮಯದಲ್ಲಿ ರಾಜ್ಯದಲ್ಲಿ ವಿಮಾನ ನಿಲ್ದಾಣ ಮತ್ತು ಹೆಲಿಪ್ಯಾಡ್‌ಗಳನ್ನು ನಿರ್ಮಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಈ ಯೋಜನೆಗಳು ದೀರ್ಘಾವಧಿ ಯೋಜನೆಗಳಾಗಿದ್ದು, ಹಲವಾರು ಶಾಸನ ಬದ್ಧ/ಅನುಕ್ರಮ (Statutory and Regulatory) ಪ್ರಾಧಿಕಾರಿಗಳಿಂದ ತೀರುವಳಿ/ಅನುಮೋದನೆ ಪಡೆಯಬೇಕಾಗಿರುವುದು ಅಲ್ಲದೆ ಭೂಸ್ವಾಧೀನ ಪ್ರಕ್ರಿಯೆಯನ್ನು ಒಳಗೊಂಡಿದೆ. ಆದರೂ ಕ್ಲುಪ್ತವಾಗಿ ಕ್ರಮ ಜರುಗಿಸಲಾಗುತ್ತಿದ್ದು ಆದರೆ ಯಾವುದೇ ಕಾಲಮಿತಿಯನ್ನು ನಿಗದಿಪಡಿಸಿರುವುದಿಲ್ಲ.

ಅನುಬಂಧ

ವಿಮಾನ ನಿಲ್ದಾಣಗಳ ಅಭಿವೃದ್ಧಿಗೆ ಭೂಸ್ವಾಧೀನ, ಇತ್ಯಾದಿಗಳಿಗಾಗಿ ಬಿಡುಗಡೆ ಮಾಡಿರುವ ಮೊತ್ತದ ವಿವರಗಳು.

(ರೂ.ಕೋಟಿಗಳಲ್ಲಿ)

ಕ್ರ ಸಂ	ವಿಮಾನ ನಿಲ್ದಾಣಗಳು	ಬಿಡುಗಡೆ ಮಾಡಿದ ಮೊತ್ತ	ಷರಾ
1.	ಬೀದರ್	5.60	ಭೂಸ್ವಾಧೀನಕ್ಕಾಗಿ / ತಾತ್ಕಾಲಿಕ ಟರ್ಮಿನಲ್ ಕಟ್ಟಡಕ್ಕಾಗಿ
2.	ಗುಲ್ಬರ್ಗ (ಪಿಪಿಪಿ)	10.02	ಭೂಸ್ವಾಧೀನಕ್ಕಾಗಿ / ಪುನರ್‌ವಸತಿಗಾಗಿ
3.	ಬೆಳಗಾಂ	13.33	ಭೂಸ್ವಾಧಿನಕ್ಕಾಗಿ
4.	ಬಿಜಾಪುರ (ಪಿಪಿಪಿ)	19.00	ಭೂಸ್ವಾಧೀನಕ್ಕಾಗಿ
5.	ಹುಬ್ಬಳ್ಳಿ	42.20	ಭೂಸ್ವಾಧೀನ ಮತ್ತು ಆಸ್ತಿ ತೆರಿಗೆ ಪಾವತಿಗಾಗಿ
6.	ಮೈಸೂರು	6.71	ಭೂಸ್ವಾಧೀನ ಮತ್ತು ವರುಣಾ ನಾಲೆಯ ಸ್ಥಳಾಂತರಕ್ಕಾಗಿ
7.	ಶಿವಮೊಗ್ಗ (ಪಿಪಿಪಿ)	25.96	ಭೂಸ್ವಾಧೀನಕ್ಕಾಗಿ
8.	ಹಾಸನ (ಪಿಪಿಪಿ)	7.99	ಭೂಸ್ವಾಧೀನಕ್ಕಾಗಿ
9.	ಮಂಗಳೂರು	20.28	ಭೂಸ್ವಾಧೀನಕ್ಕಾಗಿ / ಪುನರ್ ವಸತಿ

			ಕಲ್ಪಿಸಲು / ಕೂಡು ರಸ್ತೆ ನಿರ್ಮಾಣ
10.	ಬಳ್ಳಾರಿ	–	ಬಳ್ಳಾರಿ ವಿಮಾನ ನಿಲ್ದಾಣಕ್ಕೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕ್ರಿಯೆ ಇತ್ಯರ್ಥದಲ್ಲಿದೆ.

ವಿಷಯ : ಪ್ರವಾಸೋದ್ಯಮ ಸ್ಥಳಗಳ ಅಭಿವೃದ್ಧಿ

216 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ

ಜಿ.ಜನಾರ್ಧನ ರೆಡ್ಡಿ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು

ಅ) ಬೀದರ್ ಜಿಲ್ಲೆಯ ಯಾವ ಯಾವ ಸ್ಥಳಗಳನ್ನು ಪ್ರವಾಸೋದ್ಯಮ ಸ್ಥಳಗಳೆಂದು ಗುರುತಿಸಲಾಗಿದೆ. (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು);

ಬೀದರ್ ಜಿಲ್ಲೆಯ ಈ ಕೆಳಕಂಡ ಸ್ಥಳಗಳನ್ನು ಪ್ರವಾಸಿ ತಾಣಗಳೆಂದು ಗುರುತಿಸಲಾಗಿದೆ.

01. ಬೀದರ್
02. ಜಲಸಂಗಿ
03. ನಾರಾಯಣಪುರ
04. ಬಸವಕಲ್ಯಾಣ
05. ಕಾರಂಜ ಜಲಾಶಯ

ಆ) ಈ ಸ್ಥಳಗಳ ಅಭಿವೃದ್ಧಿಗೆ ಸರ್ಕಾರ ಕಳೆದ 3 ವರ್ಷಗಳಿಂದ ಪ್ರತಿ ವರ್ಷ ವೆಚ್ಚ ಮಾಡಿರುವ ಹಣದ ಮೊತ್ತವೆಷ್ಟು; ಹಾಗೂ ಈ ಹಣದಿಂದ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ(ಪೂರ್ಣ ವಿವರಗಳನ್ನು ಒದಗಿಸುವುದು);

01. 2006–07ನೇ ಸಾಲಿನಲ್ಲಿ ಬೀದರ್ ನಗರದ ಸಮೀಪದಲ್ಲಿರುವ ಪಾಪನಾಶ ದೇವಾಲಯ ಬಳಿ ಪ್ರವಾಸಿ ಸೌಲಭ್ಯ ನಿರ್ಮಿಸಲು ಮತ್ತು ಸುತ್ತಮುತ್ತ ಪ್ರವಾಸೋದ್ಯಮ ಸೌಲಭ್ಯ ಕಲ್ಪಿಸುವ ಬಗ್ಗೆ ರೂ. 100.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

02. 2007–08ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ ರೂ. 100.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

03. 2007–08ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ಚೌಬಾರ ಹಾಗೂ ಗವಾನ ಮದರಸಾ ಸ್ಮಾರಕಗಳ ಸುತ್ತಲೂ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ರೂ. 25.00 ಲಕ್ಷಗಳನ್ನೂ ವೆಚ್ಚ ಮಾಡಲಾಗಿದೆ.